SRI P. M. NAD GOWDA: It will be borne by the Government.

ಶ್ರೀ ಎನ್. ಜಿ. ಹಾಲಪ್ಪ :—ಸ್ವಾಮಿ, ಪೊದಲು ಪಟೇಲ್ ಶ್ಯಾನುಭೋಗರು ಏನು ಕೆಲಸ ಮಾಡುತ್ತಾ ಇದ್ದರು, ಆವಾಗ ಅವರಿಗೆ ಎಷ್ಟು ಖರ್ಚಾಗುತ್ತಿತ್ತು ? ಈವಾಗ ನೀವು ವಿಲೇಜ್ ಅಕೌಂಟೆಂಟ್ಸ್ ಅಂತ ಏನು ನೇಮಕ ಮಾಡಿದ್ದೀರಿ ಅವರಿಗೆ ಎಷ್ಟು ಖರ್ಚಾಗುತ್ತಾ ಇದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ : ಆ ಇನ್‌ಫರ್‌ಮೇಷ್ ಈಗ ನನ್ನ ಹತ್ತಿರ ಇಲ್ಲ.

SRI D. B. KALMANKAR:—Is it a fact that recently interviews were held for filling up these posts but till now no appointments are made ?

SRI P. M. NAD GOWDA:—That question will have to be put to the Minister for Revenue. The question concerns appointment of Secretaries to Village Panchayats

FOURTH FIVE YEAR PLAN

(147) SRI D. B. KALMANKAR (Aland).—

Will the Minister for Finance, Planning and Youth Welfare be Pleased to state: —

(a) whether the Fourth Five Year Plan of the State has been finalised;

(b) if so, the extent of total outlay:

(c) whether any special grants are made by the Central Government in view of the loss caused due to the recommendations of the Fifth Finance Commission?

A: SRI RAMAKRISHNA HEGDE: — (Minister for Finance, Planning and Youth Welfare)

(a) Yes.

(b) Rs. 350 crores.

(c) The Central Government is expected to grant special assistance of between Rs 100 to Rs. 110 crores to cover Plan and Non-Plan deficits during the Fourth Plan.

SRI D B. KALMANKAR: Though two to three years have elapsed no financial aid is given by the Central Government. May I know what steps have been taken by the State Government to see that necessary assistance is given at the earliest?

SRI RAMAKRISHNA HEGDE:— I cannot understand how the hon. member came to the conclusion that no Central Assistance was given. Central assistance is given.

SRI D. B. KALMANKAR:— In reply to (c) it is stated that Central Govertment is expected to grant Special assistance and not that it is already given.

SRI RAMAKRISHNA HEGDE:—The fourthplan starts from the current year and when the question was put, at that time the exact quantum of assistance wasnot known. What actually this means is, that these Rs 110 crores will be distributed over a period offive years, each year figure being determined after examination of the revenue position

ಶ್ರೀ ಎಚ್. ಬಿ. ಜ್ವಾಲನಯ್ಯ:—ನಾಲ್ಕನೆ ಪಂಚವಾರ್ಷಿಕ ಯೋಜನೆ ಈ ವರ್ಷದಿಂದ ಪ್ರಾರಂಭವಾಗುತ್ತದೆಂದು ಹೇಳಿದರು. ಅದು ೩೫೦ ಕೋಟಿ ರೂಪಾಯಿ ಗಾತ್ರದ ಯೋಜನೆ. ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಹಾಸನದಲ್ಲಿ ಒಂದು ಡೈರಿ ಪ್ರಾರಂಭ ಮಾಡಬೇಕೆಂದು ಸೇರಿಸಿದ್ದಾರೆ. ಮೊದಲನೆಯ ವರ್ಷದಲ್ಲಿಯೇ ಅದನ್ನು ತೆಗೆದುಕೊಳ್ಳುತ್ತಾರೆಯೇ?

ಶ್ರೀ ರಾಮಕೃಷ್ಣ ಹೆಗಡೆ —ಮಾನ್ಯ ಸದಸ್ಯರು ಅನಿಮಲ್ ಹಸ್ಬಂಡ್ರಿ ಮಂತ್ರಿಯವರಿಂದ ಆಶ್ವಾಸನೆಯನ್ನು ತೆಗೆದುಕೊಳ್ಳುವುದನ್ನು ನನ್ನಿಂದ ತೆಗೆದುಕೊಳ್ಳಲು ಬಯಸುತ್ತಿದ್ದಾರೆ. ಅದು ಸಾಧ್ಯವಿಲ್ಲ.

SRI. H. SIDDAVEERAPPA:—It is stated that the Fourth Five-Year Plan has commenced from Ist April 1970. May I know the performance of the Government during the half-year of the Fourth Five Year Plan? How much has been spent? Will the Hon. Minister be pleased to keep on the Table of this House the performance, according to this Plan, in the half-year ending September 1970?

SRI. RAMAKRISHNA HEGDE:—I can only say that the performance has been excellent. But the faets and figures will be made available as soon as they are available. I would also like to tell the hon. Member that since the commencement of the first year of the Fourth Plan, actually the four months of the rainy season has to be taken into consideration. Therefore, in terms of actual expenditure of money, it may not be very impressive. But by the end of the year, the performance will be more than the expectation.

SRI. H. SIDDAVEERAPPA:—At latest during the time of the Budget Session, will the hon. Minister be pleased to keep on the Table of this House, the performance of the first year of the Fourth Plan and as to how much of physical target and financial target has been achieved.

SRI RAMAKRISHNA HEGDE:—Sir, the hon. Member is not only an experienced person but also an experienced Minister We present Budget

some time by the end of February. The current year will not be over by February; so there will be a little more than a month left. Even by the end of March 1971, it would not be possible to collect all the facts and figures. Normally every year when the Budget is presented, we furnish revised estimates of both revenue as well as expenditure and that would be as accurate as possible.

SRI C. K. RAJAIAH SETTY:—Out of the special assistance of Rs.100 to Rs. 110 crores from the centre, what is it that this Government has received in the current year?

SRI RAMAKRISHNA HEGDE:—It is roughly about Rs. 30 crores.

ಶ್ರೀ ಸಿದ್ದಯ್ಯ ಕಾಶಿಮಠ:—ನಾಲ್ಕನೆಯ ಯೋಜನೆಯನ್ನು ಪ್ರಾರಂಭಿಸಿದ ನಂತರ ಕೇಂದ ಸರ್ಕಾರದಿಂದ ಗ್ರಾಂಟ್ ರೂಪವಾಗಿ ಅಥವಾ ಬೇರೆ ಯಾವುದೇ ರೂಪವಾಗಿ ಎಷ್ಟು ಹಣ ಬಂದಿದೆ

ಶ್ರೀ ರಾಮಕೃಷ್ಣ ಹೆಗಡೆ:—ಒಟ್ಟು ೧೭೩ ಕೋಟಿ ರೂಪಾಯಿ ಕೇಂದ್ರದಿಂದ ನೆರವು ದೊರೆಯ ಬೇಕಾಗಿದೆ. ಫೈನಾನ್ಸ್ ಕಮಿಷನ್ ಸಿಫಾರಸು ನಮಗೆ ವಿರೋಧವಾಗಿ ಇರುತ್ತದೆ. ಆದರೆ ಅಕಾಮೊಡೇಷನ್ ಮಾಡಲಿಕ್ಕಾಗಿ ಕೇಂದ್ರ ಸರ್ಕಾರದವರು ಪ್ಲಾನಿಂಗ್ ಕಮಿಷನ್ ಸಿಫಾರಸುಗಳ ಪ್ರಕಾರ ನೆರವು ನೀಡಲು ಒಪ್ಪಿ ಕೊಂಡಿದ್ದಾರೆ. ಆದರೆ ಎಷ್ಟು ಹಣ ಖಚಿತವಾಗಿ ನಮಗೆ ಸಿಕ್ಕಿದೆ ಎನ್ನುವುದನ್ನು ಬೇಕಾದರೆ ಮುಂದೆ ತಿಳಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ :— ಮಾನ್ಯ ಮಂತ್ರಿಗಳು ಬಹಳ ಜಾಣ್ಮೆಯಿಂದ ಉತ್ತರ ಕೊಟ್ಟರು. ವರ್ಷದ ಆಖೈರಿಗೆ ಆಗದೆ ಇದ್ದರೂ, ಜನವರಿ ಆಖೈರು ವರೆಗೂ ಎಷ್ಟು ಹಣ ಯಾವ ಯಾವ ಬಾಬಿಗೆ ಖರ್ಚಾಗಿದೆ, ಕೇಂದ್ರದಿಂದ ಬಂದಿರತಕ್ಕ ಸಹಾಯವೆಷ್ಟು ಎನ್ನುವುದನ್ನು ಹೇಳುತ್ತಾರೆಯೇ ? ಆಗಿಂದಾಗ್ಗೆ ಕೇಂದ್ರದಿಂದ ಹಣ ಬರಲಿಲ್ಲ. ಆದಕ್ಕೋಸ್ಕರ ಮಾನ್ಯ ಸಿದ್ದವೀರಪ್ಪನವರು ಕೇಂದ್ರಕ್ಕೆ ಸಿಫಾರಸು ಮಾಡಿ ಕೊಡಿಸಿದರೆ ಹೆಚ್ಚುಹಣ ಬಂದೀತು ಎಂದು ಹೇಳುತ್ತಾರೆ. ಜನವರಿ ಆಖೈರುಗಾದರೂ ಮಾಹಿತಿ ಕೊಡುವುದಕ್ಕೆ ಸಾಧ್ಯವೇ ಸ್ವಾಮಿ ?

ಶ್ರೀ ರಾಮಕೃಷ್ಣ ಹೆಗಡೆ :— ಕೇಂದ್ರದಿಂದ ಹಣ ಕೊಡುವುದಕ್ಕೆ ಮಾನ್ಯ ಸಿದ್ದವೀರಪ್ಪನವರು ಸಿಫಾರಸು ಮಾಡಬೇಕೆಂದು ಕೇಳಿಲ್ಲ. ಅಂಥ ಸಂದರ್ಭ ಬಂದರೆ ಆವಾಗ ನೋಡೋಣ. ಡಿಸೆಂಬರ್ ಕೊನೆಯವರೆಗೂ ಎಷ್ಟುಖರ್ಚಾಗಿದೆ ಎನ್ನುವ ಅಂಕಿ ಸಂಖ್ಯೆಗಳನ್ನು ತರಿಸಿಕೊಡಬಹುದು.

ಶ್ರೀ ಬಿ. ಪಿ. ಗಂಗಾಧರ್ :—ನಾಲ್ಕನೆ ಪಂಚವಾರ್ಷಿಕ ಯೋಜನೆಯನ್ನು ಈ ವರ್ಷ ಪ್ರಾರಂಭ ಮಾಡಿದ್ದಾರೆ. ತುಮಕೂರು ಜಿಲ್ಲೆ ಅಭಾವ ಪೀಡಿತ ಪ್ರದೇಶ. ಅಲ್ಲಿ ಯಾವ ಕೈಗಾರಿಕೆಯನ್ನೂ ತೆಗೆದು ಕೊಂಡಿಲ್ಲ. ಆ ಭಾಗದ ಜನರ ಸಂಕಷ್ಟವನ್ನು ನೀಗಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಅಳವಡಿಸಿ ಕೊಂಡಿದ್ದಾರೆ ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ :—ಅಭಾವ ಪರಿಸ್ಥಿತಿ ನಮ್ಮ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕೆಲವು ತಾಲ್ಲೂಕು ಗಳಲ್ಲಿ ಉಂಟಾದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೆವು. ಅವರು ಎರಡು ಕೋಟಿ ರೂಪಾಯಿ ಹಣವನ್ನು ಮಂಜೂರು ಮಾಡಿದ್ದಾರೆ. ಅದನ್ನು ನಾವು ನಿರೀಕ್ಷೆ ಮಾಡಿ ಬೇರೆ ಬೇರೆ ಡಿವಿಜನ್ಸಿಗೆ ಹಣವನ್ನು ಆಗಲೇ ಮಂಜೂರು ಮಾಡಿದ್ದೇವೆ. ತುಮಕೂರು ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿಗೆ ಒಳಗಾಗತಕ್ಕ ಕೆಲವು ಪ್ರದೇಶಗಳಲ್ಲಿ ಯಾವ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾರೆಂದು ಸದಸ್ಯರು ಕೇಳುತ್ತಾರೆ. ಇಂಥಿಂಥ ಉದ್ಯಮವನ್ನು ಸರ್ಕಾರದವರು ಸ್ಥಾಪನೆ ಮಾಡತ್ತಾರೆಂದು ಹೇಳುವುದು ಕಷ್ಟ. ಆದರೆ ಅಲ್ಲಿನ ಎಕನಾಮಿಕ್ ಕಂಡೀಷನ್ ಉತ್ತಮ ಪಡಿಸುವುದಕ್ಕೆ, ಅಲ್ಲಿಯ ಜನರ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಬೇರೆ ಬೇರೆ ಯೋಜನೆಗಳನ್ನು ತೆಗೆದುಕೊಂಡಿದ್ದೇವೆ. ನನಗೆ ನೆನಪು ಇದ್ದ ಮಟ್ಟಿಗೆ ಮಾರ್ಜಿನಲ್ ಹೋಲ್ಡರ್ಸ್ ಫೈನಾನ್ಸಿಂಗ್ ಸ್ಕೀಂ ತುಮಕೂರಿಗೆ ಅನ್ವಯ ಮಾಡಿದ್ದೇವೆ.

ಶ್ರೀ ಬಿ. ಪಿ. ಗಂಗಾಧರ್ :—ನಾಲ್ಕನೆ ಯೋಜನೆಯಲ್ಲಿ ಖಚಿತವಾಗಿ ಇಂತಿಂಥ ಕೆಲಸಗಳನು ಮಾಡುತ್ತೇವೆ ಎನ್ನುವ ಬ್ಲೂಪ್ರಿಂಟ್ ಎನಾದರೂ ಇದೆಯೇ ?

ಶ್ರೀ ರಾಮಕೃಷ್ಣ ಹೆಗಡೆ :—ಬ್ಲೂಪ್ರಿಂಟ್ ಇದೆ. ನಾಲ್ಕನೆಯ ಯೋಜನೆಯ ಸಂಬಂಧದಲ್ಲಿ ಒಂದು ಪುಸ್ತಕ ತಯಾರಾಗಿದ್ದು ಅದು ಪ್ರಿಂಟಾಗುತ್ತಿದೆ. ಮಾನ್ಯ ಸದಸ್ಯರಿಗೆ ಒಂದೊಂದು ಪ್ರತಿಯನ್ನು ಕಳುಹಿಸಿಕೊಡುತ್ತೇವೆ. ತುಮಕೂರು ಬಗ್ಗೆ ಏನೇನಿದೆ ಎನ್ನುವುದನ್ನೂ ಬರೆದಿದ್ದೇವೆ. ಅದನ್ನು ಮಾನ್ಯ ಸದಸ್ಯರು ಓದಬಹುದು.

ಶ್ರೀ ಎಸ್. ಬಂಗಾರಪ್ಪ :—ಐದನೆಯ ಹಣಕಾಸು ಆಯೋಗದವರು ನಮಗೆ ಎಷ್ಟು ಕೋಟಿ ರೂಪಾಯಿ ಕಡಮೆ ಕೊಟ್ಟಿದ್ದಾರೆ ಅದನ್ನು ತುಂಬಿಕೊಡುವುದಕ್ಕೆ ಕೇಂದ ಸರ್ಕಾರದಿಂದ ನೆರವು ಏನಾದರೂ ಬರತಕ್ಕ ಸಂದರ್ಭವಿದೆಯೋ ? ಕೇಂದ್ರದಿಂದ ೧೦೦–೧೧೦ ಕೋಟಿ ರೂಪಾಯಿಗಳ ನೆರವು ಬರುತ್ತದೆಂದು ಯಾವ ಆಧಾರದ ಮೇಲೆ ನಿರೀಕ್ಷಣೆ ಮಾಡಿದ್ದಾರೆ ? ಹಣಕಾಸು ಆಯೋಗದವರು ಕಡಮೆ ಮಾಡಿರುವುದನ್ನು ತುಂಬಿ ಕೊಡಲು ತಯಾರಾಗಿದ್ದೇವೆ ಎನ್ನುವ ವಿಚಾರದಲ್ಲಿ ಏನಾದರೂ ಅವರಿಂದ ಉತ್ತರ ಬಂದಿದೆಯೇ ? ಕೇಂದ್ರಸರ್ಕಾರದವರು ರಾಜ್ಯ ಸರ್ಕಾರದವರ ವಿಚಾರದಲ್ಲಿ ವಿರೋಧವಾದ ಭಾವನೆಗಳನ್ನು ಇಟ್ಟುಕೊಂಡಿರುವುದರಿಂದ ಐದನೆಯ ಹಣಕಾಸು ಆಯೋಗದವರು ಎಷ್ಟೊಂದು ಕೋಟಿ ರೂಪಾಯಿಗಳನ್ನು ಕಡಮೆ ಕೊಟ್ಟಿದ್ದಾರೆ ಅದನ್ನು ತುಂಬಿಕೊಡುವುದಕ್ಕೆ ಕೇಂದ್ರ ಸರ್ಕಾರದವರು ತಯಾರಾಗಿಲ್ಲ ಎನ್ನುವ ವಿಷಯ ನಮಗೆ ಗೊತ್ತಾಗಿದೆ. ಇದರಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ:—ಅವರು ತಯಾರು ಇಲ್ಲ ಎನ್ನತಕ್ಕಂಥದ್ದು ನನಗೆ ಗೊತ್ತಿಲ್ಲ. ಯಾವ ಆಧಾರದ ಮೇಲೆ ಮಾನ್ಯಸದಸ್ಯರು ಹೇಳುತ್ತಾರೆ ಎಂದು ಕೇಳುತ್ತೇನೆ. ಪ್ಲಾನಿಂಗ್ ಕಮಿಷನ್ ಅವರ ಜೊತೆಯಲ್ಲಿ ಮತ್ತು ಕೇಂದ್ರ ಸರಕಾರದ ಫಿನಾನೆಷಿಯಲ್ ರೆಪ್ರೆಜೆನೆಟೀಟೀವ್ ಅವರ ಜೊತೆಯಲ್ಲಿ ಮೂರು ಸಾರಿ ಚರ್ಚೆ ಮಾಡಿದ್ದೇವೆ. ಚರ್ಚೆಯಲ್ಲಿ ಪ್ಲಾನಿಂಗ್ ಕಮಿಷನ್‌ನವರು ಐದನೇ ಫಿನಾನ್ಸ್ ರೆಕಮೆಂಡೇಷನ್‌ನಿಂದ ನಮ್ಮ ಸರಕಾರಕ್ಕೆ ಅನ್ಯಾಯವಾಗಿದೆ ಎನ್ನುವುದನ್ನು ಕೂಡ ಒಪ್ಪಿಕೊಂಡಿದ್ದಾರೆ. ಇದನ್ನು ತುಂಬಿಕೊಡಲು ವಿಶೇಷ ಹಣ ಸಹಾಯ ಮಾಡಲು ಕೇಂದ್ರ ಸಂಕಾರದವರು ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಈ ವರ್ಷದ ಪ್ಲಾನ್ ೬೫ ಕೋಟಿ ರೂಪಾಯಿಗಳು ಎಂದು ಪ್ಲಾನಿಂಗ್ ಕಮಿಷನ್ನಿನವರು ಮತ್ತು ಕೇಂದ್ರ ಸರಕಾರದವರು ಒಪ್ಪಿಕೊಂಡಿದ್ದಾರೆ. ಮೂಲತ: ಈ ವರ್ಷದ ಪ್ಲಾನ್ ೬೦ ಕೋಟಿಗಿಂತ ಹೆಚ್ಚಾಗಿರುವ ಸಾಧ್ಯತೆ ಇರಲಿಲ್ಲ. ಲಿಖಿತ ಮೂಲಕವಾಗಿ ಅವರು ಏನೂ ಕೊಟ್ಟಿಲ್ಲ. ಮಾತುಕತೆಯ ಮೇಲೆ ಏನೋ ಒಂದು ತೀರ್ಮಾನಕ್ಕೆ ಬಂದಿದ್ದಾರೆ ಆ ತೀರ್ಮಾನದ ಪ್ರಕಾರ ೧೦೦ ರಿಂದ ೧೧೦ ಕೋಟಿ ರೂಪಾಯಿಗಳ ವಿಶೇಷ ಧನ ಸಹಾಯ ಈ ರಾಜ್ಯಕ್ಕೆ ಬರುತ್ತದೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ;— ಈಗ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ೩೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದಿರಿ ಸಂತೋಷ ಆದರೆ ೧೯೭೨ಕ್ಕೆ ಜನರಲ್ ಎಲೆಕ್ಷನ್ ಬರುತ್ತದೆ ಅವರ ಪಕ್ಷಕ್ಕೆ ಹೆಚ್ಚು ಜನ ಸದಸ್ಯರು ಬರುವ ಹಾಗೆ ಯಾವ ಯಾವ ಸ್ಕೀಂಗಳು ಮತ್ತು ಪ್ರಾಜೆಕ್ಟುಗಳು ತಯಾರಾಗಿವೆ?

ಶ್ರೀ ರಾಮಕೃಷ್ಣ ಹೆಗಡೆ:— ಅದನ್ನು ನಾವಿನೂ ತಯಾರು ಮಾಡಿಲ್ಲ.

ಶ್ರೀ ಭೋಳಾ ರಘುರಾಮಶೆಟಿ — ನಾಲ್ಕನೆ ಪಂಚವಾರ್ಷಿಕ ಯೋಜನೆಗೆ ೩೫೦ ಕೋಟಿ ಕೊಟ್ಟಿದ್ದಾರೆ ಎಂದು ಹೇಳಿದಿರಿ, ಇದರಲ್ಲಿ ೧೦೦–೧೧೦ ಕೋಟಿ ರೂಪಾಯಿಗಳು ಕೇಂದ್ರ ಸರಕಾರದಿಂದ ಸಹಾಯ ಧನವಾಗಿ ಬರುತ್ತದೆ. ಅದಕ್ಕಾಗಿ ನಮ್ಮ ರಾಜ್ಯದವರು ತೆರಿಗೆಯಿಂದ ಎಷ್ಟು ಹಣ ಕಲೆಕ್ಟ್ ಮಾಡಬೇಕೆಂದಿದ್ದಾರೆ?

ಶ್ರೀ ರಾಮಕೃಷ್ಣ ಹೆಗಡೆ:— ತೆರಿಗೆಯಿಂದ ೫೦–೫೫ ಕೋಟಿ ಕಲೆಕ್ಷನ್ ಮಾಡಬೇಕಾಗುತ್ತದೆ. ೧೧೦ ಕೋಟಿ ರೂಪಾಯಿಯ ವಿಶೇಷಧನ ಸಹಾಯ ಬಿಟ್ಟರೆ ರಾಜ್ಯ ಸರಕಾರದವರು ಏಳಿಕ್ಕಿದ್ದನ್ನು ಇಲ್ಲಿ ಎತ್ತಬೇಕಾಗುತ್ತದೆ,

ಶ್ರೀ ಐ. ಸೋಮಶೇಖರಪ್ಪ :— ೩೫೦ ಕೋಟಿ ರೂಪಾಯಿ ಬೇಕು ಎಂದು ಹೇಳಿದಿರಿ. ಇದರಲ್ಲಿ ಕೇಂದ್ರ ಸರಕಾರದಿಂದ ಗ್ರಾಂಟ್ ಎಷ್ಟು ಮತ್ತು ಲೋನ್ ಎಷ್ಟು?

ಶ್ರೀ ರಾಮಕೃಷ್ಣ ಹೆಗಡೆ — ಇದರಲ್ಲಿ ಗ್ರ್ಯಾಂಟು ಯಾವುದು ಇಲ್ಲ. ಎಲ್ಲಾ ಲೋನೆ. ಗ್ರ್ಯಾಂಟ್ ಎನ್ನತಕ್ಕಂಥದ್ದು ಕೇವಲ ಸೆಂಟ್ರಲಿ ಸ್ಪಾನ್‌ಸಾರ್ಡ್ ಸ್ಕೀಂಗಳಿಗೆ ಮಾತ್ರ ನಾಲ್ಕನೆ ಯೋಜನೆಯಲ್ಲಿ ಸೆಂಟ್ರಲಿ ಸ್ಪಾನ್‌ಸಾರ್ಡ್ ಸ್ಕೀಂಗಳು ಯಾವುದೂ ನಮ್ಮ ರಾಜ್ಯಕ್ಕೆ ಬರುತ್ತದೋ ಅದನ್ನು ತಯಾರಿಸಿದ್ದೇವೆ. ಮೊದಲು ಇದ್ದ ಅರ್ಧ ಲೋನ್ ಅರ್ಧ ಗ್ರಾಂಟು ಪದ್ಧತಿ ಹೊರಟುಹೋಗಿದೆ.

ಶ್ರೀ ಎ. ಆರ್ ಬದರೀನಾರಾಯಣ್: ನಿರುದ್ಯೋಗ ಸಮಸ್ಯೆ ನಿವಾರಣೆ ಬಗ್ಗೆ ಮತ್ತು ಭೂಸುಧಾರಣೆ ಕಾರ್ಯಗತ ಮಾಡುವುದಕ್ಕೆ ಎಷ್ಟು ಹಣವನ್ನು ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ್ದೀರಿ?

ಶ್ರೀ ರಾಮಕೃಷ್ಣ ಹೆಗಡೆ — ಭೂಸುಧಾರಣೆ ಜಾರಿಗೆ ತರುವುದಕ್ಕೆ ೩೦-೩೫ ಕೋಟಿ ರೂಪಾಯಿಗಳು ಹೋಗಾಗುತ್ತದೆ. ಈ ಬಗ್ಗೆ ಐದನೇ ಆರ್ಥಿಕ ಆಯೋಗದವರ ಮುಂದೆ ನಮ್ಮ ವಾದವನ್ನು ಮಂಡಿಸಿದ್ದೆವು. ಆದರೆ ಅವರು ಅದನ್ನು ಗಣನೆಗೆ ತೆಗೆದುಕೊಂಡಿಲ್ಲ. ಇದರ ಬಗ್ಗೆ ಏನು ಪ್ರಾವಿಜನೆ ಮಾಡಿಲ್ಲ. ನಾವು ಕೇಂದ್ರ ಸರಕಾರಕ್ಕೆ ಬರೆದಿದ್ದೇವೆ, ಇಷ್ಟು ಹಣ ಸಿಕ್ಕದಿದ್ದರೆ, ಭೂಸುಧಾರಣೆ ಕಾಯಿದೆಯನ್ನು ಜಾರಿಗೆ ತರುವುದು ಕಷ್ಟವಾಗುತ್ತದೆ. ಪ್ಲಾನಿನಲ್ಲಿ ಹಾಕಿದ ದುಡ್ಡನ್ನು ಇದಕ್ಕಾಗಿ ಒದಗಿಸುವುದಕ್ಕೆ ಸಾಧ್ಯವಿಲ್ಲ, ಹಾಗೆ ಹೂಡುವುದೂ ಒಳ್ಳೆಯದಲ್ಲ ಎಂದು ಹೇಳಿದ್ದೇವೆ ಇದರ ಬಗ್ಗೆ ಕೇಂದ್ರ ಸರಕಾರದ ಜೊತೆಗೆ ವಿಚಾರವಿನಿಮಯವಾಗುತ್ತಿದೆ.

ಶ್ರೀ ಎ.ಆರ್ ಬದರೀನಾರಾಯಣ್ — ನಿರುದ್ಯೋಗ ನಿವಾರಣೆ ಬಗ್ಗೆ ರಾಜ್ಯಸರಕಾರ ಎನು ಸ್ಕೀಂ ಹಾಕಿಕೊಂಡಿದ್ದಾರೆ?

ಶ್ರೀ ರಾಮಕೃಷ್ಣ ಹೆಗಡೆ — ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ವಿವರವಾಗಿ ಉತ್ತರ ಕೊಡುತ್ತೇನೆ. ಪ್ಲಾನಿನಲ್ಲಿ ನಿರುದ್ಯೋಗ ನಿವಾರಣೆಗಾಗಿ ಯಾವ ಒಂದು ಪ್ರಾವಿಜನನ್ನೂ ಮಾಡಿಲ್ಲ. ಉದ್ಯೋಗಾವಕಾಶಗಳನ್ನು ಒದಗಿಸುವುದರಿಂದ ನಿರುದ್ಯೋಗ ನಿವಾರಣೆ ಆಗುತ್ತದೆ. ಹೆಚ್ಚು ಹೆಚ್ಚು ಉದ್ಯೋಗಾವಕಾಶ ಸಿಕ್ಕಬೇಕಾದರೆ ಕಾರ್ಖಾನೆಗಳು ಆಗಬೇಕು, ನೀರಾವರಿ ಕೆಲಸಗಳು ಆಗಬೇಕು. ಇದರಿಂದ ನಿರುದ್ಯೋಗ ನಿವಾರಣೆ ಆಗಬೇಕೇ ಹೊರತು ಬರೀ ದುಡ್ಡಿನಿಂದ ನಿರುದ್ಯೋಗ ನಿವಾರಣೆ ಆಗುವುದಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್ — ಪಂಚವಾರ್ಷಿಕಯೋಜನೆ ಸ್ಕೀಂಗಳನು ಮಾಡುವಾಗ ಸೆಂಟ್ರಲಿ ಸ್ಪಾನ್‌ಸಾರ್ಡ್ ಸ್ಕೀಂಗಳು ಎನೇನು ಇದ್ದುವು, ಅದನ್ನು ಕೈಬಿಟ್ಟದ್ದು ಜವೇ? ಆದಕ್ಕಾಗಿ ರಾಜ್ಯ ಸರಕಾರದವರೇ ಯೋಜನೆಗಳನ್ನು ಮಾಡಿಕೊಳ್ಳುತ್ತಾರೆ ಎನ್ನುವುದು ನಿಜವೇ? ಸೆಂಟ್ರಲಿ ಸ್ಪಾನ್‌ಸರ್ಡ್ ಸ್ಕೀಂಗಳನು ರದ್ದು ಮಾಡಿರುವುದರಿಂದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇರತಕ್ಕಂಥ ಅನೇಕ ಯೋಜನೆಗಳನ್ನು ಕೈಬಿಟ್ಟಿಲ್ಲವೇ?

ಶ್ರೀರಾಮಕೃಷ್ಣ ಹೆಗಡೆ:—ರಾಜ್ಯ ಸರಕಾರ ಸೆಂಟ್ರಲಿ ಸ್ಪಾನಸಾರ್ಡ ಸ್ಕೀಂಗಳನ್ನು ರದ್ದು ಮಾಡುತ್ತೇವೆ ಎಂದು ಹೇಳಲಿಲ್ಲ. ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಒಂದು ಉಪಸಮಿತಿಯವರು ಈ ವಿಚಾರವನ್ನು ಬಹಳ ಕೂಲಂಕುಷವಾಗಿ ಚರ್ಚೆಮಾಡಿದರು. ಮೊದಲು, ಎರಡನೇ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಮತ್ತು ೩ನೇ ಪಂಚವಾರ್ಷಿಕ ಕಳೆದ ಮೇಲೂ ಅನೇಕ ಸ್ಕೀಂಗಳು ಸೆಂಟ್ರಲಿ ಸ್ಪಾನೆಸಾರ್ಡ್ ಸ್ಕೀಂಗಳು ಎಂದು ಕರೆಯಲ್ಪಟ್ಟು ಅವುಗಳಿಗೆ ಕೇಂದ್ರ ಸರಕಾರದವರು ೫೦ರಷ್ಟು, ಅಥವಾ ೭೫ ರಷ್ಟು ಭಾಗ ಗ್ರಾಂಟನ್ನು ಕೊಟ್ಟು ಆ ಮೇಲೆ ನಿಮ್ಮ ತಲೆ ಭಾರ ಎಂದು ರಾಜ್ಯ ಸರಕಾರದ ಮೇಲೆ ಅದು ಬಿದ್ದದ್ದರಿಂದ, ಎಲ್ಲಾ ಮುಖ್ಯಮಂತ್ರಿಗಳು ಸೇರಿ ಈ ಪದ್ಧತಿ ಒಳ್ಳೆಯದಲ್ಲ ಎಂದು ಅಭಿಪ್ರಾಯಪಟ್ಟರು. ರಾಜ್ಯ ಸರಕಾರ ಯಾವ ಯಾವ ಯೋಜನೆಗಳಿಗೆ ಆದ್ಯತೆ ಕೊಟ್ಟು ಮಾಡಬೇಕೆಂದು ಕೈಗೊಳ್ಳುತ್ತಾರೋ ಅವುಗಳಿಗೆ ಹಣವನ್ನು ಕೊಡಬೇಕು. ಕೇಂದ್ರ ಸರಕಾರದವರು ಕೇವಲ ಗೈಡ್ ಲೈನ್ಸ್ ಹಾಕಬೇಕೆಂದು ವಾದ ಮಾಡಿದರು ಇದಕ್ಕಾಗಿ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯಲ್ಲಿ ಒಂದು ನಿರ್ಣಯ ಕೂಡ ಆಗಿದೆ. ಅವು

(ಶ್ರೀ ರಾಮಕೃಷ್ಣಹೆಗ್ಗಡೆ):

ಸೆಂಟ್ರಲಿ ಸ್ಪಾನೆಸ್ಪಾರ್ಡ್ ಸ್ಕೀಂ ಅಲ್ಲ. ಕೇವಲ ಸೆಂಟ್ರಲ್ ಸ್ಕೀಂಗಳು ಮತ್ತು ಸ್ಟೇಟ್ ಸ್ಕೀಂಗಳು ಇವೆ. ಸ್ಟೇಟ್ ಸ್ಕೀಂಗಳು ಸಂಪೂರ್ಣವಾಗಿ ಜಾರಿಗೆ ತರತಕ್ಕಂಥ ಜವಾಬ್ದಾರಿ ರಾಜ್ಯ ಸರಕಾರದ್ದು. ಸೆಂಟ್ರಲ್ ಸ್ಕೀಮಿನು ಇದೆ ಅದನ್ನು ಜಾರಿಗೆ ತರುವ ಜವಾಬ್ದಾರಿ ನಮ್ಮದು. ಹಣ ಕೊಡುವ ಜವಾಬ್ದಾರಿ ಕೇಂದ್ರ. ಸರಕಾರದ್ದು ರಾಜ್ಯ ಸರಕಾರ ಸೆಂಟ್ರಲಿ ಸ್ಪಾನ್‌ಸಾರ್ಡ್ ಸ್ಕೀಂ ಬೇಡ ಎಂದು ಹೇಳಲಿಲ್ಲ.

FAMINE RELIEF WORK IN CHITRADURGA

164. Shri H. SIDDAVEERAPPA (Harihar):—Will the Minister for Revenue be pleased to State:—

(*a*) Whether any amount was earmarked for Chitradurga Drstrict under '64 Famine Relief Work" for the years 1968–1969 and 1969–70; if so, the amount earmarked for each taluk;

(b) the amount spent so far under this Head (taluk wise figures may be furnished);

(*c*) Whether any amount out of this head has been sanctioned and disbursed in Molkalmuru Taluk for sinking individual and common irrigation wells in the year 1968–1969 and 1969–1970; if so, who are the beneficiaries and the amount drawn by each of them;

(*d*) Whether the amount drawn and disbursed on this head has been debited to the amount of the individual beneficiaries, as loan, as per Government Order?

A Shri H V. KOUJALGI (Minister for Revenue):—

(*a*) Yes; *Vide*–Annexure–I appended.

(*b*) *Vide* Annexure–II appended.

(*c*) Yes, *Vide*–Annexure–III appended.

(*d*) Action is being taken to debit to the account to the individual beneficiary.

1968-69 "64 Famine Relief" placed at the disposal of.	1969–70 "64 Famine Relief placed at the disposal of